

# ‘ಸೀಮಿತವಲ್ಲ ಸಿನಿಮಾ’

‘ಭಾರತದಲ್ಲಿ ಪ್ರತಿ 100 ಕಿಲೋಮೀಟರ್‌ಗೂ ಭಾಷೆ ಹಾಗೂ ಸಂಸ್ಕೃತಿ ಬದಲಾಗುತ್ತಿರುತ್ತದೆ. ಈ ಭಿನ್ನತೆಗಳ ನಡುವೆಯೂ ಸಿನಿಮಾ ಎಂಬ ಮಾಧ್ಯಮ ಎಲ್ಲರನ್ನೂ ತಲುಪುತ್ತಿದೆ. ಡಬ್ಬಿಂಗ್ ಮೂಲಕ ಹಾಗೂ ಭಾಷಾ ಗಡಿಗಳನ್ನು ಮೀರಿ ಸಿನಿಮಾಗಳು ಬಿಡುಗಡೆ ಆಗುತ್ತಿರುವುದರಿಂದ ಕಥೆಗಳು ಒಂದೇ ಪ್ರದೇಶಕ್ಕೆ ಸೀಮಿತವಾಗಿ ಉಳಿದಿಲ್ಲ. ಪ್ರತಿ ಸಿನಿಮಾ, ತನ್ನದೇ ಪ್ರೇಕ್ಷಕರನ್ನು ಪಡೆದುಕೊಳ್ಳುತ್ತಿದೆ’ ಎಂದಿದ್ದಾರೆ ನಟ ಯಶ್.

ಅಮೆರಿಕದ ಲಾಸ್ ವೇಗಸ್‌ನಲ್ಲಿನ ‘ಸಿನಿಮಾಕಾನ್ 2026’ರಲ್ಲಿ ಭಾರತೀಯ ಸಿನಿಮಾರಂಗ ಹೇಗೆ ಬದಲಾವಣೆಗೆ ಒಡ್ಡಿಕೊಳ್ಳುತ್ತಿದೆ ಹಾಗೂ ಸಿನಿಮಾಗಳು ಪ್ರೇಕ್ಷಕರನ್ನು ಹೆಚ್ಚಿನ ಮಟ್ಟದಲ್ಲಿ ಹೇಗೆ ತಲುಪುತ್ತಿವೆ ಎಂಬ ಕುರಿತು ಮಾತನಾಡುತ್ತಾ, ಹೀಗೊಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಯಶ್.

ತಮ್ಮ ‘ಟಾಕ್ಸಿಕ್’ ಸಿನಿಮಾ ಬಗ್ಗೆ ಮಾತನಾಡಿರುವ ಅವರು, “ಇದು ರೆಗ್ಯುಲರ್ ಆ್ಯಕ್ಷನ್ ಡ್ರಾಮಾ ಅಲ್ಲ. ಪ್ರೇಕ್ಷಕರಿಗೆ ಬಹಳ ಚೆನ್ನಾಗಿ ಕನೆಕ್ಟ್ ಆಗುತ್ತದೆ. ಡಾರ್ಕ್ ಶೇಡ್ ಪಾತ್ರಗಳನ್ನು ನಿರ್ವಹಿಸುವುದು ನನಗಿಷ್ಟ. ‘ಟಾಕ್ಸಿಕ್’ನಲ್ಲಿ ನಾನು ನಿರ್ವಹಿಸಿದ ಪಾತ್ರಕ್ಕೆ ಹಲವು ಶೇಡ್‌ಗಳು, ಲುಕ್‌ಗಳಿವೆ” ಎಂದು ತಮ್ಮ ಪಾತ್ರವನ್ನು ಬಣ್ಣಿಸಿದ್ದಾರೆ.

‘ಟಾಕ್ಸಿಕ್’ ನಿರ್ದೇಶಕರಾದ ಗೀತು ಮೋಹನ್‌ದಾಸ್ ಅವರೊಂದಿಗೆ ಕೆಲಸ ಮಾಡಿದ ಅನುಭವವನ್ನು ತೆರೆದಿಡುತ್ತಾ, “ಟಾಕ್ಸಿಕ್’ ನನ್ನ ಪಾಲಿಗೆ ಮಹತ್ವಾಕಾಂಕ್ಷೆಯ ಸಿನಿಮಾ. ಈ ಸಿನಿಮಾಗೆ ಬಲಿಷ್ಠ ತಾಂತ್ರಿಕ ತಂಡವಿತ್ತು. ಗ್ಯಾಂಗ್‌ಸ್ಟರ್ ಕಥೆಗೆ ಗೀತು ಅವರು ತಾಜಾ ಆಯಾಮ ನೀಡಿದ್ದಾರೆ” ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ■

# ಪಾತ್ರ ವೈವಿಧ್ಯದ ಅಚ್ಚರಿಯಲ್ಲಿ ಶ್ರುತಿ



‘ಸಿನಿಮಾರಂಗದಲ್ಲಿ ಬೋಲ್ಡ್ ಆಗಿ, ಪ್ರಾಮಾಣಿಕವಾಗಿ ಕಥೆ ಹೇಳಲು ಈಗ ಅವಕಾಶಗಳಾಗುತ್ತಿವೆ. ವಾಸ್ತವಿಕ, ಸಿದ್ಧ ಸೂತ್ರಗಳನ್ನು ಅನುಸರಿಸದ ಹೊಸ ಪ್ರಯೋಗಗಳಿಗೆ ಮಣೆ ಹಾಕುತ್ತಿರುವುದು ಮಹತ್ವದ ವಿಷಯ’ ಎಂದಿದ್ದಾರೆ ನಟಿ ಶ್ರುತಿ ಹರಿಹರನ್.

ಪ್ರಮೋದ್ ಶೆಟ್ಟಿ ಅಭಿನಯದ ‘NH 66’ ಎಂಬ ರೋಡ್ ಟ್ರಿಪ್ ಕುರಿತ ಸಿನಿಮಾದಲ್ಲಿ ಅಭಿನಯಿಸುತ್ತಿರುವ ಶ್ರುತಿ, ಸದ್ಯ ಐದು ಸಿನಿಮಾಗಳಲ್ಲಿ ತೊಡಗಿಕೊಂಡಿದ್ದು, ಶೀಘ್ರವೇ ಘೋಷಣೆಯಾಗಲಿರುವುದಾಗಿ ತಿಳಿಸಿದ್ದಾರೆ. ಸಿನಿಮಾರಂಗದ ಕೆಲವು ಪಲ್ಲಟಗಳ ಕುರಿತು ಮಾತು ಹಂಚಿಕೊಂಡಿದ್ದಾರೆ.

“ಹಿಂದೆ, ಮಹಿಳೆಯರ ಪಾತ್ರಗಳು ಕಪ್ಪು ಇಲ್ಲವೇ ಬಿಳುಪಿನಂತಿದ್ದವು. ಪುರುಷನನ್ನು ತಿದ್ದುವ ಹೆಣ್ಣು, ಸುಂದರ– ಮುದ್ದಾದ ಹೆಣ್ಣು ಅಥವಾ ಅತಿಯಾದ ಆದರ್ಶದಿಂದ ಕೂಡಿದ ಹೆಣ್ಣು... ಹೀಗೆ ಒಂದಷ್ಟು ಪಾತ್ರಗಳಲ್ಲೇ ಅವಳು ಕಾಣಿಸಿಕೊಳ್ಳುತ್ತಿದ್ದಳು ಹಾಗೂ ಹಾಗೆ ಅವಳನ್ನು ಚಿತ್ರಿಸುತ್ತಿದ್ದರು. ಈಗ ಅದು ಬದಲಾಗುತ್ತಿದೆ. ಮಹಿಳೆಯರನ್ನು ಅವರಿದ್ದ ಹಾಗೇ ತೋರುವ ಪ್ರಯತ್ನ ನಡೆಯುತ್ತಿದೆ. ಅಂಥದ್ದೊಂದು ಪಾತ್ರ ‘NH66’ ಸಿನಿಮಾದಲ್ಲಿ ನನಗೆ ಸಿಕ್ಕಿದೆ” ಎಂದು ಮಾತು ಸೇರಿಸಿದ್ದಾರೆ.

‘ಜನ ಸಹಜತೆಯನ್ನು ಒಪ್ಪಿಕೊಳ್ಳುತ್ತಿದ್ದಾರೆ. ಮಹಿಳೆಯರನ್ನು ಆನ್‌ಸ್ಕ್ರೀನ್ ಮೇಲೆ ತೋರುತ್ತಿರುವ ರೀತಿಯಲ್ಲಿ ಒಟಿಟಿ ವೇದಿಕೆಗಳ ಪ್ರಭಾವ ಕೂಡ ಸಾಕಷ್ಟಿದೆ. ಮಹಿಳೆಯರ ಪಾತ್ರ ವೈವಿಧ್ಯಗಳು ಅಚ್ಚರಿದಾಯಕವಾಗಿವೆ’ ಎಂದು ವಿವರಿಸಿದ್ದಾರೆ.

ಸಿನಿಮಾ ಎಂಬುದು ಬಿಸಿನೆಸ್ ಕೂಡ ಹೌದು ಎಂಬ ವಾಸ್ತವದ ಅಂಶವನ್ನು ಮುಂದಿಡುತ್ತಲೇ, ‘ಸಿನಿಮಾ ಹಣ ಮಾಡಬೇಕು. ಪ್ರಾಮಾಣಿಕ ತಂಡ ಪ್ರಾಮಾಣಿಕವಾಗಿ ಕಥೆ ಹೇಳಿದರೆ, ಅದರಿಂದ ಹಣ ಕೂಡ ಚೆನ್ನಾಗಿ ಆಗಬೇಕು ಎಂದು ನಿರೀಕ್ಷಿಸುವುದರಲ್ಲಿ ತಪ್ಪಿಲ್ಲ. ಕಲಾವಿದರಾಗಿ ನಾವೂ ಸಿನಿಮಾದಿಂದ ಬೆಳೆಯಬೇಕು’ ಎಂದಿದ್ದಾರೆ.

ಈಚೆಗೆ ‘ಸಮ ವೆಲ್‌ನೆಸ್’ ಎಂಬ ಉದ್ಯಮ ಆರಂಭಿಸಿರುವ ಶ್ರುತಿ, ‘ಸಿನಿಮಾದಲ್ಲಿ ಕಲಿಕೆಯಿದ್ದಂತೆ ಇಲ್ಲೂ ಕಲಿಕೆ ಸಾಗಿದೆ’ ಎಂದು ಮಾಹಿತಿ ಹಂಚಿಕೊಂಡಿದ್ದಾರೆ. ■